# ಮೈಕ್ರೊ ಡ್ರಾಮಾ ಹೊಸ ಪ್ರಯತ್ನ



**ಸಮೀಪ್ ಆಚಾರ್ಯ**
**ಸ್ಟಾರ್ ಸುವರ್ಣದ 'ಸ್ನೇಹದ ಕಡಲಲ್ಲಿ'ಯ ಇಂದ್ರಜಿತ್**

◆ **ನಿಮ್ಮ ಪರಿಚಯವನ್ನು ಹೇಳಿ.**

ಮೂಲ ಉಡುಪಿ, ಬೆಳೆದಿದ್ದು ಮುಂಬೈ. 'ಸ್ನೇಹದ ಕಡಲಲ್ಲಿ' ಧಾರಾವಾಹಿಯಲ್ಲಿ ಇಂದ್ರಜಿತ್ ಪಾತ್ರ ಮಾಡುತ್ತಿದ್ದೇನೆ. ನಾಯಕನ ಪಾತ್ರವನ್ನೇ ಮಾಡುತ್ತಿದ್ದ ನಾನು ಇದೇ ಮೊದಲ ಬಾರಿಗೆ ನೆಗೆಟಿವ್ ಪಾತ್ರವನ್ನು ಮಾಡಿದ್ದೇನೆ. ಈ ಪಾತ್ರಕ್ಕೆ ಅವಕಾಶ ನನ್ನ ಪಾಲಿಗೆ ಇದೆ ಎನ್ನುವ ಸುದ್ದಿ ಬಂದಾಗ ನನ್ನೊಳಗೆ ತುಂಬ ಸಂಘರ್ಷ ಆಗಿತ್ತು. ಒಬ್ಬ ನಟನಾಗಿ ಇಂತಹ ಪಾತ್ರವನ್ನೂ ಮಾಡಬೇಕು ಎಂದು ನಿರ್ಣಯಿಸಿದೆ. ಪಾತ್ರವನ್ನು ನೋಡಿದಾಗ ವೈಯಕ್ತಿಕವಾಗಿಯೂ ಇಷ್ಟ ಆಯಿತು.

◆ **ಈ ಪಾತ್ರದ ಬಗ್ಗೆ ವೀಕ್ಷಕರ ಪ್ರತಿಕ್ರಿಯೆ ಹೇಗಿದೆ?**

ಹೊರಗಡೆ ಎಲ್ಲಿಗಾದರೂ ಹೋದಾಗ ಪಾತ್ರದ ಪ್ರಭಾವಳಿ ಗೊತ್ತಾಗುತ್ತದೆ. ಇತ್ತೀಚೆಗೆ ಹೋಟೆಲ್‌ಗೆ ಹೋದಾಗ ಒಬ್ಬ ಅಜ್ಜಿ ಬಂದು 'ನೀವು ತೆರೆಯಲ್ಲಿ ಬಂದಾಗ ಸಿಕ್ಕಾಪಟ್ಟೆ ಬೈಯುತ್ತೇವೆ. ಅದು ಏನು ಎಂದು ಕೇಳಬೇಡಿ' ಎಂದರು. ಕೊನೆಗೆ ಅವರೇ ಪಾತ್ರವನ್ನು ತುಂಬ ಚೆನ್ನಾಗಿ ನಿಭಾಯಿಸುತ್ತಿದ್ದೀರಿ ಎಂದು ಕೇಳಿದರು. ಹಿರಿಯ ನಟಿ ಗಿರಿಜಮ್ಮ 'ನಿನ್ನನ್ನು ನೋಡಿದರೆ ಭಯ ಆಗುತ್ತದೆ. ಸಾಮಾಜಿಕ ಮಾಧ್ಯಮಗಳಲ್ಲಿಯೂ ಹಾಗೆಯೇ ಮಾತನಾಡುತ್ತಿದ್ದಾರೆ' ಎಂದರು. ಒಟ್ಟಾರೆ ಪ್ರೇಕ್ಷಕರು ಬೈಯುತ್ತಿದ್ದಾರೆ ಎಂದರೆ ಆ ಪಾತ್ರಕ್ಕೆ ನ್ಯಾಯ ಸಿಕ್ಕಿದೆ ಎಂದು ಅರ್ಥ. ನಾನು ಕೆಲಸ ಮಾಡಿದ ಬೇರೆ ಪಾತ್ರಗಳಿಗೆ ಹೋಲಿಸಿ ನೋಡಿದರೆ ಒಂದರಂತೆ ಮತ್ತೊಂದು ಇಲ್ಲ. ನನಗೆ ನಾಯಕ ಅನ್ನಿಸಿಕೊಳ್ಳುವುದಕ್ಕಿಂತ ಒಳ್ಳೆಯ ನಟ ಎಂದು ಕರೆಸಿಕೊಳ್ಳಬೇಕು.

◆ **ಪಲ್ಲವಿ ಮತ್ತು ಇಂದ್ರಜಿತ್ ಜಗಳ ಕೊನೆಗೊಳ್ಳಬಹುದಾ ಹೇಗೆ?**

ಕಥೆ ಹೇಗೆ ಹೋಗುತ್ತದೆ ಎನ್ನುವುದರ ಮೇಲೆ ನಿರ್ಣಯ ಆಗುತ್ತದೆ. ಈಗಲೇ ಅದರ ಬಗ್ಗೆ ಹೇಳಲು ಆಗುವುದಿಲ್ಲ. ಕಥೆಗೆ ತುಂಬ ಒಳ್ಳೆಯ ಹರಿವು ಇದೆ ಎನ್ನಬಹುದು. ಕಥೆಗೆ ಅನೇಕ ತಿರುವುಗಳೂ ಸಿಗುತ್ತವೆ. ಅನೇಕ ಏರಿಳಿತಗಳು ಅದಕ್ಕಿದೆ. ಅನೇಕ ಕಲಾವಿದರು ಇಂತಹ ಪಾತ್ರ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತಾರೆ. ನನಗೆ ಅದು ಸಿಕ್ಕಿದೆ ಎಂದರೆ ನಾನೆಂಥ ಅದೃಷ್ಟವಂತ ಎಂದೆನಿಸುತ್ತದೆ. ನಮ್ಮಿಬ್ಬರ ನಡುವಿನ ದ್ವೇಷ ಅಸೂಯೆ ಕೂಡ ಕುತೂಹಲವನ್ನು ಹೊಂದಿದೆ. ಅದು ಮುಂದಿನ ಕಥನವನ್ನು ತೆರೆದುಕೊಳ್ಳುತ್ತಾ ಸಾಗುತ್ತದೆ.

◆ **ಈ ಸಂದರ್ಭದಲ್ಲಿ ಸಿನಿಮಾ ಅವಕಾಶ ಸಿಕ್ಕರೆ ಏನು ಹೇಳುತ್ತೀರಿ?**

ಎಲ್ಲ ಅವಕಾಶಗಳಿಗೂ ತೆರೆದ ಮನಸು ನನ್ನದು. ಸಿನಿಮಾ ಆದರೂ ಅಷ್ಟೇ, ಸೀರಿಯಲ್ ಆದರೂ ಅಷ್ಟೆ. ಯಾವತ್ತೂ ನಿರ್ದಿಷ್ಟ ಪಾತ್ರದ ಬಯಕೆ ನನಗೆ ಇಲ್ಲ. ಚಿಕ್ಕ ಪಾತ್ರ ಆದರೂ ಅದಕ್ಕೊಂದು ತೂಕ ಇರಬೇಕು. ಕಥೆಯಲ್ಲಿ ಅದಕ್ಕೆ ಒಳ್ಳೆಯ ಅವಕಾಶವಿರಬೇಕು. ನನಗೆ ಭಿನ್ನವಾಗಿ ಅದನ್ನು ನಿರ್ವಹಿಸಲು ಎಷ್ಟು ಸಾಧ್ಯ ಎನ್ನುವುದನ್ನು ನೋಡುತ್ತೇನೆ. ಟೈಟಲ್ ಪಾತ್ರವನ್ನು ಹೆಚ್ಚಿನವರು ಬಯಸುತ್ತಾರೆ. ಆದರೆ ಆ ರೀತಿಯ ಆಸೆ ನನಗಿಲ್ಲ. ಸಿಕ್ಕ ಪಾತ್ರಕ್ಕೆ ಮಹತ್ವ ಬರುವಂತೆ ಹೇಗೆ ನಟಿಸುತ್ತೇನೆ ಎನ್ನುವುದು ಮಾತ್ರ ನನಗೆ ಮುಖ್ಯ.

◆ **ಯಾವುದೇ ಪಾತ್ರದ ಆಳ ಅಗಲವನ್ನು ಹೇಗೆ ಅಳೆಯುತ್ತೀರಿ?**

ಸಾಮಾನ್ಯವಾಗಿ ಪಾತ್ರವೊಂದನ್ನು ನಿರ್ವಹಿಸುವ ಸಂದರ್ಭ ಬಂದಾಗ ಅದರ ಜೊತೆ ನಮ್ಮನ್ನು ಹೋಲಿಸಿಕೊಳ್ಳುತ್ತೇವೆ. ಈ ಪಾತ್ರದಲ್ಲಿಯೂ ನನ್ನನ್ನು ನೋಡಿದೆ. ಅದರಲ್ಲಿ ಎಲ್ಲವೂ ನನಗೆ ವಿರುದ್ಧವಾಗಿ ಕಾಣಿಸಿತು. ವಿರುದ್ಧ ವ್ಯಕ್ತಿತ್ವವನ್ನು ಅಭಿನಯಿಸುತ್ತಿದ್ದೇನೆ ಅಂದರೆ ಅದೇ ಮೊದಲ ಸವಾಲು ಎಂದು ನಿರ್ಣಯಿಸಿದೆ. ಬೆಳಿಗ್ಗೆ ಮೇಕಪ್ ಹಾಕಿದರೆ ತೆಗೆಯುವ ತನಕ ನಾನು ಇಂದ್ರಜಿತ್ ಆಗಿಯೇ ಇರುತ್ತೇನೆ. ನಟರಿಗೆ ಸಿಗುವ ವಿಶೇಷ ಅವಕಾಶ ಇದು ಎಂದೆನಿಸುತ್ತದೆ. ಒಟ್ಟಾರೆ ಯಾವುದೇ ಪಾತ್ರ ಆದರೂ ಅದಕ್ಕೆ ಕಥೆಯಲ್ಲಿ ತೂಕ ಇರಬೇಕು ಎನ್ನುವುದು ನನ್ನ ನಿರೀಕ್ಷೆ.

◆ **ಕಥೆಯನ್ನು ಬರೆಯಬೇಕಾದ ಸಂದರ್ಭ ಬಂದರೆ ಹೇಗೆ?**

ಖಂಡಿತ ನಾನು ಬರೆಯುತ್ತೇನೆ. ಒಬ್ಬ ನಟನಾಗಿ ಹಲವು ಚಿಂತನೆಗಳು ಬರುತ್ತವೆ. ಈಗಾಗಲೇ ಅಂತಹ ಪ್ರಯತ್ನವನ್ನು ಮಾಡಿದ್ದೇನೆ. ಮುಂಬೈಯಲ್ಲಿ ಇದ್ದಾಗಲೇ ಕಥೆಗಳನ್ನು ಬರೆಯುತ್ತಿದ್ದೆ. ಕಥೆಗೆ ಬೇಕಾಗುವ ಒಂದು ಸಾಲಿನ ಯೋಚನೆಗಳು ಸಾಕಷ್ಟು ಬರುತ್ತವೆ. ಕಥೆಗಳನ್ನು 'ಘೋಸ್ಟ್ ರೈಟಿಂಗ್' (ಬೇರೆ ಹೆಸರಿನಲ್ಲಿ ಬರೆಯುವುದು) ಮಾಡಿದ್ದೇನೆ. ಅದು ಯಾವುದು ಎಂದು ಹೇಳಲು ಆಗುವುದಿಲ್ಲ. 'ಮೈಕ್ರೊ ಡ್ರಾಮಾ' ನಿರ್ಮಾಣವನ್ನು ಮಾಡುತ್ತಿದ್ದೇನೆ. ಕೊರಿಯನ್ ಡ್ರಾಮಾ ಮಾದರಿಯಲ್ಲಿ ಕನ್ನಡಕ್ಕೆ ಇದು ಪರಿಚಯ ಆಗುತ್ತಿದೆ. ಅದಕ್ಕೆ ನಾನೇ ಬರೆಯುತ್ತಿದ್ದೇನೆ. ಕಲಾವಿದನಾಗಿ ಆರಂಭದಿಂದ ಅಂತ್ಯದ ಎಲ್ಲ ಕೆಲಸ ಮಾಡಲು ಸಿದ್ಧವಿರಬೇಕು ಎನ್ನುವುದು ನನ್ನ ಯೋಚನೆ. 'ಕುಕು ಟಿವಿ'ಗೆ ಮೈಕ್ರೊ ಡ್ರಾಮಾ ಸೀರೀಸ್ ಒಂದನ್ನು ಮಾಡಿದ್ದೇನೆ. ಈಗ ಎರಡನೆಯದನ್ನು ಮಾಡುತ್ತಿದ್ದೇನೆ. ಕೆ. ಡ್ರಾಮಾ ಮಾದರಿಯಲ್ಲಿ ಕನ್ನಡಕ್ಕೆ ಹೊಸ ವೇದಿಕೆ. ಭವಿಷ್ಯದಲ್ಲಿ ಇನ್ನೂ ಇದು ಬೆಳೆಯುತ್ತದೆ. ಅದಕ್ಕೆ ಹೊಸ ಚಿಂತನೆಗಳು ಬರಬೇಕು. ತುಂಬಾ ಆಸಕ್ತಿಯನ್ನು ಹುಟ್ಟಿಸಿದೆ.

■ **ರಾಘವೇಂದ್ರ ಕೆ.**